ಪದ್ಮಾ ಗೆಲುವಿನಿಂದ ತನ್ನ ಹೊಟ್ಟೆಯನ್ನು ಪದೇ ಪದೆ ನೋಡಿಕೊಳ್ಳುತ್ತಾ, ಹೊಟ್ಟೆ ಸವರಿಕೊಳ್ಳುತ್ತಾ, 'ಮಗು ಇದ್ರೊಳಗ ಐತಾ. ಯಾವಾಗ ಹೊರಗ ಬರುತ್ತಾ. ಆಯ್ತು ಮಗು ಬರೋ ತನ ಜೋಪಾನ ನೋಡ್ಕೋತಿನಿ...' ಎಂದಳು. ಮರುದಿನದಿಂದ ಆ ಹುಡುಗ ಗುಡಿಯ ಕಡೆ ಮಲಗಲು ಬರುವುದನ್ನು ಬಿಟ್ಟ. ಪದ್ಮಾ ಹೊಟ್ಟೆ ನೋಡಿಕೊಳ್ಳುತ್ತಾ ಖುಷಿಗೊಳ್ಳತೊಡಗಿದಳು. ಅವಳ ತುಟಿಯಲಿ ಹೀಗೆ ನಗೆ ನವಿಲು ಲಾಸ್ಯವಾಡಿ ಅದೆಷ್ಟು ದಿನಗಳಾಗಿತ್ತೋ. ಮುಖದಲ್ಲಿ ಒಂದು ಸಣ್ಣ ಕಾಂತಿಯ ಸೆಳಕು ಕಾಣತೊಡಗಿತ್ತು. ಅವಳ ಸಡಗರಕ್ಕೆ ಪಾರವೇ ಇರಲಿಲ್ಲ.

ಹಸಿವಾದಾಗಷ್ಟೇ ಊಟಕ್ಕಾಗಿ ಮನೆ ಮನೆ ಅಲೆಯುತ್ತಿದ್ದಳು. ಒಂದು ದಿನ ಹೀಗೆ ಊಟಕ್ಕಾಗಿ ಅಲೆಯುತ್ತಾ ತಮ್ಮ ಮನೆಯ ಮುಂದೆಯೇ ನಿಂತಳು. ಪದ್ಮಾಳ ಅತ್ತೆ ತಾಯವ್ವ ಇವಳನ್ನು ನೋಡಿ ಕರುಳು ಚುರುಗುಟ್ಟಿ ಒಳ ಕರೆದೊಯ್ದು ಕೈ, ಮುಖ ತೊಳೆದು ಊಟಕ್ಕೆ ಹಾಕಿದಳು. ತಾಯವ್ವ ಮಾತಾಡಿಸಿದರೂ ಪದ್ಮಾ ತನ್ನದೇ ಲೋಕದಲ್ಲಿದ್ದಳು. ಊಟ ಮುಗಿದ ಮ್ಯಾಲೆ ಎದ್ದ ಪದ್ಮಾ, 'ನೋಡಮ್ಮ ಇಲ್ಲಿ ನನ್ನ ಹೊಟ್ಟೆಯೊಳಗೆ ಮಗು ಇದೆ. ಒಂದಿಷ್ಟು ದಿನದಾಗ ಹೊರಗ ಬರುತ್ತ...' ಅಂತ ಕಿಲ ಕಿಲ ನಕ್ಕಳು.

ತಾಯವ್ವ ಗಾಬರಿಗೆ ಬಿದ್ದಳು. ಅವಳ ಹೊಟ್ಟೆ ದಿಟ್ಟಿಸಿದಳು. ಇವಳು ಬಸುರಿಯಾಗಿದ್ದು ನಿಜವೆನಿಸಿತು. ತಮ್ಮ ತಪ್ಪಿನ ಅರಿವಾಗಿ ಹಳಹಳಿಸುತ್ತಿರುವಾಗಲೇ ಮಗ ದೇವರಾಜ ಮನೆಗೆ ಬಂದ. ಪದ್ಮಾಳನ್ನು ನೋಡಿ ಕೆಂಡಾಮಂಡಲನಾದ. 'ಈ ಹುಚ್ಚೀನ ಯಾಕ ಕರ್ಕೊಂಡಿ ಮನಾಗ. ಗೊಡ್ಡ ಹೆಂಗಸಿದು. ಇವ್ಳ ಜೊತಿಗೆ ನಮ್ದೇನು. ಅಷ್ಟು ತಿಳಿಯಲ್ಲನುಬೇ ನಿನಗ ಮುದುಕಿ ಆಗಿ...' ಎಂದು ಸಿಟ್ಟಿಗೆದ್ದು ಒದರಾಡತೊಡಗಿದ. ತಾಯವ್ವ ಕಣ್ಣೀರುಗರೆಯತೊಡಗಿದಳು. ದೇವರಾಜ ಅವರವ್ವ ಅಳುತ್ತಿರುವುದಕ್ಕೆ ಹೌಹಾರಿದ. ತಾನು ಬಯ್ಯಬಾರದಿತ್ತು ಅಂದುಕೊಂಡ. 'ಸಿಟ್ಟಿನ್ಯಾಗ ಅಂದೆ. ಅದ್ಕ ಅಳ್ತಾರನಬೆ...' ಅಂತಾ ರಮಿಸಲು ನೋಡಿದ. ತಾಯವ್ವ ಬಿಕ್ಕಳಿಸಿ ಬಿಕ್ಕಳಿಸಿ ಅಳತೊಡಗಿದಳು. ಪದ್ಮಾ ಅಳುಕುತ್ತಲೇ ಅವರನ್ನು ನೋಡತೊಡಗಿದಳು. ಕ್ಷಣ ಹೊತ್ತು ತಡೆದು ನಗತೊಡಗಿದಳು. ದೇವರಾಜ ಅವಳಿಗೆ ಕೆಂಗಣ್ಣು ಬಿಟ್ಟ. ಅವಳು ಹೊಟ್ಟೆ ತೋರಿಸಿ, 'ಇಲ್ನೋಡು. ಇದ್ರೊಳಗೆ ಮಗು ಐತಿ. ಒಂದಿಷ್ಟು ದಿನದಾಗ ಹೊರಗ ಬರುತ್ತ...' ಎಂದು ನಗ ತೊಡಗಿದಳು. ದೇವರಾಜ ಅವಳ ಬಸುರಿ ಹೊಟ್ಟೆ ನೋಡಿ ಮೂರ್ಛೆ ಹೋದ.

★★★

ತಾಯವ್ವ ತನ್ನ ಗಂಡ ಗೋವಿಂದನಿಗೂ ನಿಜ ಹಕೀಕತ್ತು ಹೇಳಿದಳು. ಏನು ಮಾಡಬೇಕೋ ತಿಳಿಯದಾಯಿತು ಅವರಿಗೆ. ದೇವರಾಜನಂತೂ ಅನಿರೀಕ್ಷಿತ ಆಘಾತದಿಂದ ತತ್ತರಿಸಿ ಹೋಗಿದ್ದ. ಅವನಿಗೆ ಅವಮಾನವೇ ಕತ್ತರಿಸಿಕೊಂಡು ಮೈ ಮ್ಯಾಲೆ ಬಿದ್ದಂತಾಗಿತ್ತು. ತನ್ನ ಬಗೆಗೆ ತಾನೇ ರೋಷಗೊಂಡ. ಪದ್ಮಾ ಮಾತ್ರ ತನಗೂ ಲೋಕಕ್ಕೂ ಸಂಬಂಧವೇ ಇಲ್ಲದಂತೆ ಹೊಟ್ಟೆ ನೋಡಿಕೊಳ್ಳುತ್ತಾ ಹರ್ಷಗೊಂಡು ಇನ್ನೇನು ಮಗು ಬಂದು ಬಿಡುತ್ತದೆಂದು ಹೇಳಿದ್ದನ್ನೇ ಹೇಳುತ್ತಾ ಇವರೆಲ್ಲರ ಕಡೆ ನಗು ಬಿಸಾಕುತ್ತಿದ್ದಳು.

ತಾಯವ್ವ, 'ಪದ್ಮಾ ಬಸುರಿ ಇರೋದು ಯಾರ್ಗೂ ಹೇಳಬ್ಯಾಡ್ರಿ. ಹೇಳಿದ್ರ ಮಂದಿ ತಲಿಗೊಂದು ಮಾತಾಡ್ತಾರ. ಅದ್ಕ ಸುಮ್ಮನ ಇದ್ದು ಬಿಡೋಣು. ಇನ್ಮೇಲೆ ಆಕಿ ಮನ್ಯಾಗ ಇರ್ಲಿ. ಆ ಮ್ಯಾಲೆ ಇಕಿ ಬಸುರಿ ಇರೋದು ಮಂದಿಗೆ ತಾನ ಗೊತ್ತಾಗುತ್ತ. ಆದ್ರ ಇಕಿ ಇಲ್ಲೇ